# <u>ತನುವೆಂಬ ದೊಡ್ಡ ದೋಣಿಯಲಿ</u>

1. **Ref.:** Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchhu Rayaru.
2. **Ref.:** Samagra Dasa Sahity, Samputa 4, published by Kannada & Culture Dept, Govt of Karnataka, Bengaluru.
3. **Note:** The wordings in both the references above are same. The singer has followed the wordings as per Ref. 1

ತನುವೆಂಬ ದೊಡ್ಡ ದೋಣಿಯಲಿ

ಹರಿ ನಾಮವೆಂಬ ಬಂಡವ ತುಂಬಿ

ವ್ಯವಹಾರವನು ಮಾಡುವೆನಯ್ಯ

ಇಂದ್ರಿಯಗಳೆಂಬ ಸುಂಕಿಗರು ಅಡ್ಡಾದರೆ

ಮುಕುಂದನ ಮುದ್ರೆಯನೇ ತೋರಿ ಹೊಳೆಯ ದಾಟುವೆನಯ್ಯ

ಪುರಂದರ ವಿಠಲನಲ್ಲಿಗೆ ಪೋಗಿ

ಮುಕುತಿ ಸುಖದ ಲಾಭವ ಪಡೆವೆ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಲಾಕ್ಷಣಿಕವಾಗಿ ಈ ಉಗಾಭೋಗದಲ್ಲಿ ದಾಸರು ಹರಿ ಭಕ್ತಿ ಸಾಧನೆಯನ್ನು ಒಂದು ವ್ಯಾಪಾರಕ್ಕೆ ಹೋಲಿಸಿ ಹೇಳಿದ್ದಾರೆ.

**ಬಂಡ** = ಸರಕು

**ಸುಂಕಿಗರು** = ಸುಂಕದವರು

**ವಿ.ಸೂ : -** ಪ್ರಾಚೀನ ಕಾಲದಲ್ಲಿ ನೌಕಾ ವ್ಯಾಪಾರಸ್ಥರು ರಾಜಮುದ್ರೆಯನ್ನು ಅಲ್ಲಲ್ಲಿ ಉಕ್ಕಡದವರಿಗೆ ತೋರಿಸಿ ಊರಿಂದ ಊರಿಗೆ ಸಂಚರಿಸುತ್ತಿದ್ದರು.

**Classification:** Ugabhoga
**Ankita:** purandara vittala
**Location:** NA
**Category:** Sankeerna, bhakti
**Sub-Category:** deha, Krishna, mudre, bhakti, vyapara
**Pravachana:** NA
**Explanation:** NA